# ಕರುಣೆಯ ಸೊಡರು

ನಿಜವಾದ 'ಸಂತ'ರು ಮತ್ತು 'ಅಧ್ಯಾತ್ಮ'ವಾದಿಗಳ ಚಹರೆಗಳನ್ನು ಕುರಿತು ಆಲೋಚಿಸುವಾಗಲೆಲ್ಲ ಟಾಲ್‌ಸ್ಟಾಯ್ ಮಹರ್ಷಿ ಹೇಳಿರುವುದು ನೆನಪಾಗುತ್ತದೆ: 'ಇತರರ ಬಲವಂತ ದುಡಿಮೆಯ ಫಲವನ್ನು ತಾವು ಅನುಭವಿಸುವುದು ಪಾಪಕರ'. ಪರರ ದುಡಿಮೆಯ ಮೇಲೆಯೆ ತಮ್ಮ ಕೀರ್ತಿಸೌಧ ಕಟ್ಟಿಕೊಂಡಿರುವ ಈ ಅಧ್ಯಾತ್ಮವಾದಿಗಳು ತಮ್ಮನ್ನು 'ಧರ್ಮ'ದ ಪ್ರತಿನಿಧಿಗಳೆಂದೂ, ಸಮಾಜಕ್ಕೆ ಆಧ್ಯಾತ್ಮಿಕ ಹಾಗೂ ನೈತಿಕ ಮೌಲ್ಯಗಳನ್ನು ಬೋಧಿಸುವ ಹಕ್ಕುಳ್ಳವರೆಂದು ಭಾವಿಸುವುದರಲ್ಲಿಯೇ ಇವರ ದೋಷವಿದೆ (ಕೆಲವು ಅಪವಾದಗಳ ಹೊರತಾಗಿ). ತಮ್ಮ ಜಾತಿ ಮತ್ತು ಧರ್ಮದಾಚೆ ಯೋಚಿಸಲಾಗದ ಸಂಕುಚಿತವಾದಿಗಳು ಇವರು. ಸಮಾಜ ಎದುರಿಸುತ್ತಿರುವ ಅಕರಾಳ ವಿಕರಾಳ ವಿಕ್ಷಿಪ್ತತೆಗಳನ್ನು ಅರಿಯಲು ಅಸಮರ್ಥರಾಗಿರುವ ಈ ಅಧ್ಯಾತ್ಮವಾದಿಗಳ ಸೋಗನ್ನು ತಿಳಿಯಲು ಸಮಾಜ ಹೀನಾಯವಾಗಿ ಸೋತಿದೆ. ಇತರರಿಗಿಂತ ತಾವು ಮಾತ್ರ ಪರಿಶುದ್ಧರು ಹಾಗೂ ಧರ್ಮಕ್ಕೆ ತಾವೇ ಹೆಚ್ಚು ಸಮೀಪದಲ್ಲಿರುವವರು ಎನ್ನುವ ಗುಣವನ್ನು ಅಧ್ಯಾತ್ಮವಾದಿಗಳು ತಮಗೆ ತಾವೇ ಆರೋಪಿಸಿಕೊಂಡಿರುವುದೇ ಈ ಎಲ್ಲ ಸಮಸ್ಯೆಗಳ ಮೂಲ.

ಬುದ್ಧದೇವ ಮತ್ತು ಬಸವರಂಥ ಮನುಕುಲದ ಶ್ರೇಷ್ಠರು ಯಾವ ದೈವಿಕ ಪವಾಡವನ್ನೂ ಮಾಡದೆ, ಮತ ಮಾನ್ಯಗಳನ್ನು ಕಟ್ಟದೆ, ತಮ್ಮ ಸರಳತೆ ಹಾಗೂ ಎರಡಿಲ್ಲದ ನಡೆನುಡಿಯಿಂದ ಬಾಳಿ, ನಿಜವಾದ ಅಧ್ಯಾತ್ಮವು ಜನತೆಯ ಕಲ್ಯಾಣ, ನಿಸ್ವಾರ್ಥ ಮತ್ತು ಉದಾರವಾದ ಬದುಕಿನಲ್ಲಿದೆ ಎಂದು ತೋರಿಸಿಕೊಟ್ಟವರು. ಇಂತಹ ಸಂತರ ಬದುಕು ಇಂದಿನ ಕಪಟ ಅಧ್ಯಾತ್ಮವಾದಿಗಳಿಗೆ ಮಾದರಿಯಾಗಬೇಕಿತ್ತು!

ಸಂತರು ಮೂಲತಃ ಬಹುತ್ವದ ಪರವಾಗಿರುವವರು. ಜನತೆಯೊಂದಿಗೆ ಬಾಳಿ ಬದುಕಿದವರು. ಸಂಸಾರ ಮತ್ತು ಸಮಾಜವನ್ನು ಮಿಥ್ಯೆಯೆಂದು ನಿರಾಕರಿಸಲಿಲ್ಲ. 'ಇದ್ದರಿರಬೇಕು ಸಂಸಾರ ಸುಖದಲ್ಲೀಗೆ, ಪದ್ಮಪತ್ರವು ಜಲದೊಳಗಿದ್ದ್ಹಾಂಗೆ' ಎಂದು ತೋರಿಸಿಕೊಟ್ಟರು. ಮಡಿ ಮೈಲಿಗೆಯ ಸೋಂಕಿಲ್ಲದ ನಿಜವಾದ ಸಂತರು. ನಡೆ–ನುಡಿಗಳಲ್ಲಿ ಒಂದಾಗಿರುವ ಈ ಸಂತರು ಅರಮನೆ–ಗುಡಿಸಲುಗಳ ಭೇದವಿಲ್ಲದೆ ಎಲ್ಲರ ಮೇಲೂ ಪ್ರೇಮ ಮತ್ತು ಸಾಮರಸ್ಯದ ಮಳೆಗರೆಯುವ ಮೋಡಗಳು. ಚೈತನ್ಯದಾಯಕವೂ, ಕಠಿಣವಲ್ಲದ ಸರಳಜೀವನ ಶೈಲಿಯಿಂದ ಎಲ್ಲರನ್ನೂ ತಮ್ಮೆಡೆಗೆ ಸೆಳೆಯುವ ಹಾಗೂ ಸಹಬಾಳ್ವೆಯ ಮೌಲ್ಯಗಳನ್ನು ಹೊಂದಿರುವ ಕರುಣೆಯ ಸೊಡರು ಅವರು.

ತೋರಿಕೆಯ ಅಧ್ಯಾತ್ಮವಾದಿಗಳು 'ಕಾಮ, ಕ್ರೋಧ ಆಸೆಬುರುಕುತನ'ಗಳನ್ನು ಗೆಲ್ಲಲಾಗದ, ಜಾತಿ, ವರ್ಣ, ಮೇಲು–ಕೀಳನ್ನು ಯಾವ ಎಗ್ಗೂ ಇಲ್ಲದೆ ಸಾರ್ವಜನಿಕವಾಗಿ ಆಚರಿಸುವವರು ಹಾಗೂ ತನ್ನ ದೇಹ ಸುಖಕ್ಕಾಗಿ ಲಜ್ಜಾಹೀನವಾಗಿ ಹಾತೊರೆಯುವವರು. ಇಂತಹರು ಎಂದೂ ಅಧ್ಯಾತ್ಮವಾದಿಗಳಾಗಲಾರರು. ಹೆಚ್ಚೆಂದರೆ ಇವರನ್ನು ಅಧ್ಯಾತ್ಮಿಕತೆಯ ಮಾರಾಟಗಾರರು ಎನ್ನಬಹುದೇನೋ! ಇದೆಲ್ಲಕ್ಕಿಂತ ಮಿಗಿಲಾಗಿ ಕೆಳ ಸಮುದಾಯಗಳಲ್ಲಿರುವ ಧಾರ್ಮಿಕ ವೈವಿಧ್ಯಗಳನ್ನು ಏಕರೂಪಗೊಳಿಸುವ ಹುಚ್ಚು ಮನಸ್ಸಿನವರು. ವಿಜ್ಞಾನ, ವೈಚಾರಿಕ ಶಿಕ್ಷಣ ಮತು ಸಮಾಜ ಪರಿವರ್ತನೆಯ ಚಿಂತನೆಗಳನ್ನು ತಿರಸ್ಕರಿಸುವ ಈ ಅಧ್ಯಾತ್ಮವಾದಿಗಳು ಆಳದಲ್ಲಿ ಯಥಾಸ್ಥಿತಿವಾದಿಗಳೂ ಆಗಿರುತ್ತಾರೆ. ಇಂತಹವರನ್ನು ಕುರಿತೇ ಶರಣರು 'ಮಣಿಯನೆಣಿಸಿ ಕಾಲವ ಕಳೆಯಬೇಡ', 'ಯೋಗದ ಹೊಲಬ ನೀನೆತ್ತ ಬಲ್ಲೆ' ಎಂದು ಸೋಗಲಾಡಿ ಅಧ್ಯಾತ್ಮವಾದಿಗಳನ್ನು ದೂರ ಸರಿಸಿದ್ದಾರೆ.

ತಮ್ಮ 'ಪೀಠ'ಗಳಿಗೆ ನಿಷ್ಠರಾಗಿಲ್ಲದವರನ್ನು, ಧರ್ಮಪಥದಿಂದ ಹೊರಗಿರುವವರು ಎಂದು ಭಾವಿಸುವ ಅಧ್ಯಾತ್ಮವಾದಿಗಳಲ್ಲಿರುವ ಅತಾರ್ಕಿಕ ಕಠೋರತೆಯನ್ನು ಕುರಿತೇ ತುಕಾರಾಮರು ತಮ್ಮ ಅಭಂಗದಲ್ಲಿ 'ಹೆಸರಿಗೆ ತಕ್ಕ ಆಚರಣೆಯಿಲ್ಲದ ಈ ಸಾಧುಗಳನ್ನು ಏನೆಂದು ವರ್ಣಿಸಲಿ? ಮೈಗೆ ಬೂದಿ ಬಳಿದುಕೊಂಡು, ಕಣ್ಣು ಮುಚ್ಚಿಕೊಂಡು ಪಾಪಗಳನ್ನು ಮಾಡುತ್ತಾ, ವೈರಾಗ್ಯದ ತೋರಿಕೆಗಳನ್ನು ಪ್ರದರ್ಶಿಸುತ್ತಲೇ ವಿಷಯಲಂಪಟತ್ವದಲ್ಲಿ ತೊಡಗಿರುತ್ತಾರೆ. ಮತ್ತೆ ಮತ್ತೆ ಏನು ಹೇಳಲಿ? ಧಿಕ್ಕಾರವಿರಲಿ ಅವರ ಸಹವಾಸಕ್ಕೆ' ಎಂದು ಹೇಳಿದ್ದಾರೆ.

ನಿಜವಾದ ಸಂತರ ಬಾಳು ಪ್ರೇಮ, ಕಾರುಣ್ಯಗಳಿಂದ ಕೂಡಿರುತ್ತದೆ. ಜಾತಿ, ಕುಲ, ಧರ್ಮಗಳ ಮಿತಿದಾಟಿ ಎಲ್ಲರ ಎದೆಯಲ್ಲೂ ನೆಲೆಸಿರುತ್ತದೆ. ನಮ್ಮ ನಡುವೆ ಬಾಳಿ, ಬದುಕಿದ ಅನೇಕ ಶರಣರು ಮತ್ತು ತತ್ವಸಾಧಕರ ಬದುಕು ನಮ್ಮ ಕಣ್ಣಮುಂದಿದೆ. ಸಂತರೇ ಹೇಳುವಂತೆ, 'ನಾವು ಮನಸ್ಸಿನಿಂದ ಯೋಗಿಗಳು, ಉಳಿದವರು ತನುವಿನಿಂದ ಯೋಗಿಗಳು'. ಬಂಧನವಿಲ್ಲದ ಪರಿಶುದ್ಧ ಜೀವನ, ದಯೆ, ಔದಾರ್ಯ ಮತ್ತು ಆಶಾಪಾಶಗಳ ನಿಗ್ರಹ ಇವುಗಳ ಅಸ್ತಿವಾರದ ಮೇಲೆ ಅವರ ಬದುಕು ಕಟೆಯಲಾಗಿದೆ. 'ಅವರು ಸಾಬೂನು, ನೀರು ಇಲ್ಲದೆಯೇ ಮನುಷ್ಯರ ಸ್ವಭಾವವನ್ನು ನಿರ್ಮಲಗೊಳಿಸುವವರು'. ಇಂತಹ ಸಂತರೇ ಇಂದಿಗೂ ನಮ್ಮ ಸಮಾಜದಲ್ಲಿ ಸರ್ವಜನರಿಂದಲೂ ಗೌರವಕ್ಕೆ ಪಾತ್ರರಾಗುತ್ತಿದ್ದಾರೆ.

ಕೇವಲ ಅಧ್ಯಾತ್ಮಿಕತೆಯನ್ನು ಬೋಧಿಸುವವರು ಮಾತ್ರ ಸಂತರಲ್ಲ! ಸಮಾಜ ಪರಿವರ್ತನೆಯನ್ನೂ ಅಧ್ಯಾತ್ಮದಂತೆಯೇ ಕಡು ನಿಷ್ಠೆಯಿಂದ ಧ್ಯಾನಿಸುತ್ತಿದ್ದ ವಿವೇಕಾನಂದ, ಗಾಂಧಿ, ರಾಮಮನೋಹರ ಲೋಹಿಯಾ, ಶಾಂತವೇರಿ ಗೋಪಾಲಗೌಡ ಇವರುಗಳೂ ಕೂಡ ಜನತೆ ಆರಾಧಿಸುವ ಬರಿಗೈ ಸಂತರು. 'ಪರಧರ್ಮ ಮತ್ತು ಪರವಿಚಾರ'ಗಳನ್ನು ಗೌರವಿಸುತ್ತಿದ್ದ ಈ ಜ್ಞಾನದ ಚೇತನಗಳು, ಬಹುಜನರ ಹಿತವೇ ತಮ್ಮ ಹಿತವೆಂದು ತಿಳಿದ ಉನ್ನತ ಚಾರಿತ್ರ್ಯ ಮತ್ತು ವಿವೇಕದ ಲೋಕಚಿಂತಕರು. ನಿಜವಾದ ಅರ್ಥದಲ್ಲಿ ಜನತೆಯ ಹೃದಯವನ್ನು ಬೆಸೆಯುವ ಜಾತ್ಯತೀತ ಮತ್ತು ಮಾನವತೆಯ ಮೌಲ್ಯಗಳು ಉಸಿರಾಡುವ ಜಗತ್ತು ಈ ಸಂತರದ್ದು. ಇಂತಹ ಉತ್ಕೃಷ್ಟ ಆಧ್ಯಾತ್ಮಿಕತೆಯ ಅನುಭಾವಿಗಳನ್ನೇ ಕುರಿತು ಕಬೀರ ಹೇಳಿರುವ ಮಾತುಗಳು ನಿಜವಾದ ಸಂತರ ಗುಣಗಳನ್ನು ಹೀಗೆ ಕಾಣಿಸಿದೆ:

ಸಾಧುಗಳು ಮಹಾ ಪಾರಮಾರ್ಥಿಗಳು ಅವರು ಮೋಡದಂತೆ ಬಂದು ಎಲ್ಲೆಡೆಗೂ ಮಳೆಗರೆಯುವರು; ತಮ್ಮೊಡನೆ ಸ್ಪರ್ಶಮಣಿಯನ್ನು ತಂದು ಅದರ ಸ್ಪರ್ಶಮಾಡಿಸಿ ಎಲ್ಲರ ತಾಪವನ್ನು ಹೋಗಲಾಡಿಸುವರು.

ಮುಖ್ಯವಾಗಿ ಸಂತರು ತಾವು ಯಾರ ಅಧೀನಕ್ಕೂ ಒಳಗಾಗದೆ, ಯಾರನ್ನೂ ಅಧೀನಕ್ಕೊಳಪಡಿಸಿಕೊಳ್ಳದೆ, ಸತ್ಯಪಥದಲ್ಲಿ ನಡೆದವರು. 'ವೃಕ್ಷವು ಎಂದೂ ತನ್ನ ಹಣ್ಣನ್ನು ತಾನು ತಿನ್ನುವುದಿಲ್ಲ. ನದಿಯು ತನಗಾಗಿ ನೀರನ್ನು ಸಂಚಯಿಸಿಕೊಳ್ಳುವುದಿಲ್ಲ' ನಿವಾದ ಸಂತರು ಇರಬೇಕಾದದ್ದು ಹೀಗೆ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಒಬ್ಬ ಮನುಷ್ಯ, ಆತನ ಸ್ನೇಹಿತರು ಹೊಗಳಿ ಹಾಡುವಷ್ಟು ಒಳ್ಳೆಯವನೂ ಇರುವುದಿಲ್ಲ, ಅವನಿಗಾಗದವರು ತೆಗಳಿ ತಿರಸ್ಕರಿಸುವಷ್ಟು ಕೆಟ್ಟವನೂ ಇರುವುದಿಲ್ಲ.
  —ಮಾಸ್ತಿ ವೆಂಕಟೇಶ ಅಯ್ಯಂಗಾರ್
- ನಿಜವಾದ ಪ್ರೀತಿ ಮತ್ತು ಸತ್ಯವು ಯಾವುದೇ ದುಷ್ಟಶಕ್ತಿ ಅಥವಾ ದುರದೃಷ್ಟಕ್ಕಿಂತಲೂ ಪ್ರಬಲ.
  —ಚಾರ್ಲ್ಸ್ ಡಿಕನ್
- ಯಾರು ಪ್ರಪಂಚದ ಸುಖವನ್ನು ಹೆಚ್ಚಿಸಲು ಯತ್ನಿಸುತ್ತಾರೋ ಅವರು ತಮ್ಮ ಸುಖವನ್ನೂ ಹೆಚ್ಚಿಸಿಕೊಳ್ಳುತ್ತಾರೆ.
  —ಶಿವರಾಮ ಕಾರಂತ
- ಡಾಕ್ಟರ್ ಸುತ್ತ ರೋಗಿಗಳೇ ಇರುವಂತೆ, ಒಳ್ಳೆಯವರ ಸುತ್ತ ಕೆಟ್ಟವರೇ ಇರುತ್ತಾರೆ.
  —ಬೀಚಿ
- ಕೊಳಲೂದಲು ಉಸಿರು ಬೇಕಿಲ್ಲ. ಬೇಕಿರುವುದು ಕಿಚ್ಚು. ಎದೆಯೊಳಗೆ ಕಿಡಿಯಿಲ್ಲದೆ. ನಾದ ಹೊಮ್ಮುವುದು ಹೇಗೆ?
  —ರೂಮಿ
- ಕಪ್ಪು ಬಣ್ಣವು ಭಾವನಾತ್ಮಕವಾಗಿ ಕೆಟ್ಟದು. ಆದರೆ ಪ್ರತಿಯೊಂದು ಕಪ್ಪು ಬೋರ್ಡ್ ವಿದ್ಯಾರ್ಥಿಗಳ ಜೀವನವನ್ನು ಪ್ರಕಾಶಮಾನಗೊಳಿಸುತ್ತದೆ.
  —ಎಪಿಜೆ ಅಬ್ದುಲ್ ಕಲಾಂ